**ಕರ್ನಾಟಕ ವಿಧಾನಪರಿಷತ್ತು**

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 45 (66) |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.08.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಮಂಜೂರಾದ ಬೋಧಕ ಮತ್ತು ಬೋಧಕೇತರ ಹುದ್ದೆಗಳೆಷ್ಟು; ಆ ಪೈಕಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; ಖಾಲಿ ಇರುವ ಹುದ್ದೆಗಳೆಷ್ಟು; (ಸಂಪೂರ್ಣ ವಿವರ ನೀಡುವುದು)</td><td>
ಬೋಧಕ ವೃಂದದ ಹುದ್ದೆಗಳ ವಿವರ
<table>
<tr><th>ಶಾಲಾ ವಿಧ</th><th>ಜಿಲ್ಲೆಯ ಹೆಸರು</th><th>ಮಂಜೂರಾದ ಹುದ್ದೆಗಳು</th><th>ಕಾರ್ಯನಿರತ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td rowspan="2">ಪ್ರಾಥಮಿಕ ಶಾಲಾ ಶಿಕ್ಷಕರು</td><td>ದಕ್ಷಿಣ ಕನ್ನಡ</td><td>4451</td><td>2994</td><td>1457</td></tr>
<tr><td>ಉಡುಪಿ</td><td>2500</td><td>1939</td><td>561</td></tr>
<tr><td rowspan="2">ಪ್ರೌಢ ಶಾಲಾ ಶಿಕ್ಷಕರು</td><td>ದಕ್ಷಿಣ ಕನ್ನಡ</td><td>1410</td><td>1043</td><td>367</td></tr>
<tr><td>ಉಡುಪಿ</td><td>1053</td><td>833</td><td>220</td></tr>
<tr><td rowspan="2">ಪ್ರೌಢ ಶಾಲಾ ಮುಖ್ಯ ಶಿಕ್ಷಕರು</td><td>ದಕ್ಷಿಣ ಕನ್ನಡ</td><td>136</td><td>127</td><td>09</td></tr>
<tr><td>ಉಡುಪಿ</td><td>81</td><td>74</td><td>7</td></tr>
</table>
ಬೋಧಕೇತರ ವೃಂದದ ಹುದ್ದೆಗಳ ವಿವರ
<table>
<tr><th>ಜಿಲ್ಲೆಯ ಹೆಸರು</th><th>ಮಂಜೂರಾದ ಹುದ್ದೆಗಳು</th><th>ಕಾರ್ಯನಿರತ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>ದಕ್ಷಿಣ ಕನ್ನಡ</td><td>528</td><td>175</td><td>353</td></tr>
<tr><td>ಉಡುಪಿ</td><td>371</td><td>151</td><td>217</td></tr>
</table>
</td></tr>
<tr><td>ಆ)</td><td>ಖಾಲಿ ಇರುವ ಹುದ್ದೆಗಳ ನೇಮಕಕ್ಕೆ ಯಾವ ಕ್ರಮವಹಿಸಲಾಗಿದೆ; ವಹಿಸಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು;</td><td>
ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ:-<br>
1. 2025-26 ನೇ ಸಾಲಿನಲ್ಲಿ ಆಯವ್ಯಯ ಘೋಷಣೆಯಲ್ಲಿ "ಶಾಲಾ ಶಿಕ್ಷಣ ಇಲಾಖೆಯಲ್ಲಿ ಖಾಲಿ ಇರುವ 5000 ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು" ಎಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಕಂಡಿಕೆ 119 ರಲ್ಲಿ ಘೋಷಿಸಿರುತ್ತಾರೆ. ಅದರಂತೆ, ಸರ್ಕಾರಿ ಪ್ರಾಥಮಿಕ
</td></tr>
</table>

| | | |
|---|---|---|
| | | ಶಾಲೆಗಳ ಒಟ್ಟು 3900 ಹುದ್ದೆಗಳಿಗೆ ರೂ.23379.88/- ಲಕ್ಷಗಳು ಹಾಗೂ ಸರ್ಕಾರಿ ಪ್ರೌಢ ಶಾಲೆಗಳ ಒಟ್ಟು 1100 ಹುದ್ದೆಗಳಿಗೆ ಒಟ್ಟು ರೂ.8629.37/- ಲಕ್ಷಗಳು ಸೇರಿದಂತೆ ಒಟ್ಟು 5000 ಹುದ್ದೆಗಳಿಗೆ ನೇರ ನೇಮಕಾತಿ ಪ್ರಕ್ರಿಯೆಗೆ ಅನುಮತಿ ನೀಡಿದಲ್ಲಿ ಮೇಲಿನಂತೆ ಬೇಕಾಗುವ ಒಟ್ಟಾರೆ ರೂ 32009.25/- ಲಕ್ಷಗಳು ವಾರ್ಷಿಕವಾಗಿ ಅಂದಾಜು ವೆಚ್ಚ ತಗಲುಬಹುದೆಂದು ಅಂದಾಜಿಸಿ ನೇರ ನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸಮರ್ಪಕ ಮರುಹೊಂದಾಣಿಕೆ ಪ್ರಕ್ರಿಯೆ ಮುಗಿದ ನಂತರದ ಖಾಲಿ ಹುದ್ದೆಗಳಿಗೆ ನೇಮಕಾತಿಗೆ ಮರು ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದರಂತೆ ಸಮರ್ಪಕ ಮರುಹೊಂದಾಣಿಕೆ ಪ್ರಕ್ರಿಯೆ ಪ್ರಸ್ತುತ ಚಾಲ್ತಿಯಲ್ಲಿರುತ್ತದೆ.<br>2. ಪ್ರಸ್ತುತ ಇರುವ ಖಾಲಿ ಹುದ್ದೆಗಳಲ್ಲಿ ಬೋಧಕ ವೃಂದದ ಸಹ ಶಿಕ್ಷಕರುಗಳ ಖಾಲಿ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ **ಅತಿಥಿ ಶಿಕ್ಷಕರನ್ನು** ನೇಮಕ ಮಾಡಿಕೊಂಡು ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.<br>**ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದ:-**<br>ದಿನಾಂಕ:05-10-2024 ರಂದು ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರಿಗೆ ಸರ್ಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರ ಹಾಗೂ ತತ್ಸಮಾನ ಉಪಪ್ರಾಂಶುಪಾಲರ ವೃಂದದ ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಮೂಲಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br>ಗ್ರೂಪ್-ಬಿ ಮುಖ್ಯಶಿಕ್ಷಕರು/ಉಪಪ್ರಾಂಶುಪಾಲರ ಖಾಲಿ ಇರುವ ಹುದ್ದೆಗಳಿಗೆ ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕರು ಹಾಗೂ ತತ್ಸಮಾನ ವೃಂದದಿಂದ ಕಾಲಕಾಲಕ್ಕೆ ಮುಂಬಡ್ತಿ ನೀಡುವ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br>**ಬೋಧಕೇತರ ವೃಂದ:-**<br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಖಾಲಿ ಇರುವ ಬೋಧಕೇತರ ವೃಂದದ ಹುದ್ದೆಗಳನ್ನು ಅನುಕಂಪದ ಆಧಾರಿತ ನೇಮಕಾತಿ, ಬಡ್ತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |
| ಇ) | ಸದರಿ ಜಿಲ್ಲೆಗಳ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳಾದ ತರಗತಿ ಕೊಠಡಿ, ಆಟದ ಮೈದಾನ, ಶೌಚಾಲಯ, ಆವರಣ ಗೋಡೆ, ಕುಡಿಯುವ ನೀರು, ವಿದ್ಯುತ್ ಸೌಲಭ್ಯ, ಅಡುಗೆ ಕೊಠಡಿಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಎಷ್ಟು ಅನುದಾನ ಮೀಸಲಿಸಲಾಗಿದೆ; ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು) | ಒಟ್ಟಾರೆ 2025-26ನೇ ಸಾಲಿಗೆ ಶಾಲಾ ಶಿಕ್ಷಣ ಇಲಾಖೆಯ, ರಾಜ್ಯವಲಯದ ಆಯವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಯಡಿ ಕಂಡಿಕೆ 116ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಪಿ 91 ಯೋಯೋಕ 2025 ಬೆಂಗಳೂರು ದಿನಾಂಕ:27.05.2025ರಲ್ಲಿ<br>1. ರಾಜ್ಯದಲ್ಲಿನ ಸರ್ಕಾರಿ ಶಾಲೆಗಳಿಗೆ ಶೌಚಾಲಯ ಸೌಲಭ್ಯಗಳನ್ನು ಒದಗಿಸಲು ರೂ.5000.00 ಲಕ್ಷಗಳು ಅನುಮೋದನೆಗೊಂಡಿರುತ್ತದೆ. |

<table>
<tr>
<td></td>
<td></td>
<td>
2. ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.65500.00 ಲಕ್ಷಗಳು ಅನುಮೋದನೆಗೊಂಡಿರುತ್ತದೆ.<br>
3. ಕೆ.ಪಿ.ಎಸ್. ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರೂ.2000.00 ಲಕ್ಷಗಳು ಅನುಮೋದನೆಗೊಂಡಿರುತ್ತದೆ.<br>
4. ಜಿಲ್ಲೆಗಳಿಂದ ಸದರಿ ಅನುದಾನಕ್ಕೆ ಅವಶ್ಯಕತೆಯಿರುವ ಶಾಲೆಗಳ ಪಟ್ಟಿಯನ್ನು ಪಡೆದು, ಮಕ್ಕಳ ದಾಖಲಾತಿಗೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಆದ್ಯತೆ ಮತ್ತು ಅನುದಾನದ ಲಭ್ಯತೆಯ ಮೇಲೆ ಹಂತ ಹಂತವಾಗಿ ಮೂಲಭೂತ ಸೌಲಭ್ಯ ಕಲ್ಪಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
</td>
</tr>
<tr>
<td>ಈ)</td>
<td>ಸದರಿ ಜಿಲ್ಲೆಗಳಲ್ಲಿ ಇರುವ ಎಲ್ಲಾ ಶಾಲೆಗಳ ಜಮೀನುಗಳ ದಾಖಲೆಗಳು ಶಾಲೆಗಳ ಹೆಸರಿನಲ್ಲಿ ಇವೆಯೇ; ಯಾವ ಯಾವ ಶಾಲೆಗಳ ಜಮೀನಿನ ದಾಖಲೆಗಳ ಸಮರ್ಪಕವಾಗಿಲ್ಲ; ಇವುಗಳನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ? (ವಿವರ ಒದಗಿಸುವುದು).</td>
<td>
<table>
<tr><th>ಕ್ರಸಂ</th><th>ಜಿಲ್ಲೆಯ ಹೆಸರು</th><th>ಒಟ್ಟು ಸರ್ಕಾರಿ ಶಾಲೆಗಳ ಸಂಖ್ಯೆ</th><th>RTC ಆಗಿರುವ ಶಾಲೆಗಳ ಸಂಖ್ಯೆ</th><th>RTC ಆಗಲು ಬಾಕಿ ಇರುವ ಶಾಲೆಗಳ ಸಂಖ್ಯೆ</th></tr>
<tr><td>1</td><td>ದಕ್ಷಿಣ ಕನ್ನಡ</td><td>1062</td><td>1006</td><td>56</td></tr>
<tr><td>2</td><td>ಉಡುಪಿ</td><td>686</td><td>468</td><td>218</td></tr>
</table>
ಶಾಲಾ ಹೆಸರಿಗೆ ವರ್ಗಾವಣೆ ಮಾಡಿಸಲು ಮತ್ತು ಶಾಲಾ ಆಸ್ತಿ ಸಂರಕ್ಷಣೆ ಮಾಡಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ರವರ ಸುತ್ತೋಲೆ ದಿನಾಂಕ: 05.10.2024 ರನ್ವಯ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಅಭಿಯಾನ/ಆಂದೋಲನದ ರೂಪದಲ್ಲಿ ಕ್ರಮವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.
</td>
</tr>
</table>

ಸಂಖ್ಯೆ: ಇಪಿ 284 ಎಸ್ಎಲ್‌ಬಿ 2025

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.